ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

27

ಇಲಾಖೆ / ವಿಷಯ : DEPARTMENT / SUBJECT: ಹೈಕೋರ್ಟ್ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 27/11/20


# ವಯಸ್ಕ ಮಹಿಳೆ ಎಲ್ಲಿ, ಯಾರೊಂದಿಗೆ ಬೇಕಾದರೂ ವಾಸಿಸಬಹುದು

27/11/20




» ದೆಹಲಿ ಹೈಕೋರ್ಟ್

**ನವದೆಹಲಿ:** ವಯಸ್ಕ ಮಹಿಳೆ ತಾನು ಬಯಸಿದ ಸ್ಥಳದಲ್ಲಿ, ಇಚ್ಛೆಪಟ್ಟವರೊಂದಿಗೆ ವಾಸಿಸಲು ಸ್ವತಂತ್ರಳು. ಹೆತ್ತವರು ಆಕೆಗೆ ಯಾವುದೇ ರೀತಿಯ ಬೆದರಿಕೆ ಹಾಕುವಂತಿಲ್ಲ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಸೆ.12ರಂದು ದೆಹಲಿಯ ಯುವತಿ ನಾಪತ್ತೆಯಾಗಿದ್ದಳು. ಆಕೆಯನ್ನು ಅಕ್ರಮವಾಗಿ ಬಂಧಿಸಿಡಲಾಗಿದೆ ಎಂದು ಯುವತಿಯ ಸಹೋದರಿ ಮತ್ತು ಹೆತ್ತವರು ದೂರು ಸಲ್ಲಿಸಿದ್ದರು. ಯುವತಿಯನ್ನು ಪತ್ತೆ ಹಚ್ಚಿದ್ದ ಪೊಲೀಸರು ಆಕೆಯನ್ನು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಕೋರ್ಟ್ ಮುಂದೆ ಹಾಜರುಪಡಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠ, ಯುವತಿ ಅಪ್ರಾಪ್ತೆಯಲ್ಲ ಮತ್ತು 20 ವರ್ಷ ತುಂಬಿದೆ. ಅಲ್ಲದೆ, ತನ್ನ ಇಷ್ಟದ ಪ್ರಕಾರವೇ ಯುವಕನೊಂದಿಗೆ ತೆರಳಿ ಮದುವೆಯಾಗಿರುವುದಾಗಿ ಹೇಳಿಕೆ ನೀಡಿದ್ದಾಳೆ. ಹೀಗಾಗಿ, ಆಕೆ ಯುವಕನೊಂದಿಗೆ ವಾಸ್ತವ್ಯ ಹೂಡಲು ಸ್ವತಂತ್ರಳಾಗಿದ್ದು, ಬೆದರಿಕೆ ಒಡ್ಡುವಂತಿಲ್ಲ ಎಂದು ಸೋದರಿ ಮತ್ತು ಹೆತ್ತವರಿಗೆ ತಿಳಿಸಿದೆ. ಪೊಲೀಸರು ಹೆತ್ತವರು ಮತ್ತು ಸೋದರಿಗೆ ಸೂಕ್ತ ರೀತಿಯಲ್ಲಿ ಮಾರ್ಗದರ್ಶನ ನೀಡಿ, ಮನವೊಲಿಸಬೇಕು ಮತ್ತು ಯುವತಿಯನ್ನು ಯುವಕನಿರುವಲ್ಲಿಗೆ ತಲುಪಿಸಬೇಕು ಎಂದೂ ಕೋರ್ಟ್ ಸಲಹೆ ನೀಡಿದೆ.